ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ , ಕುಂದಾಪುರ

ಸಿ.ಸಿ. ನಂಬ್ರಃ 1828/2015

ಚಾಸಾಃ 7 ಪ್ರಾಸಾಃ2

ದಿನಾಂಕಃ 09.07.2025

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಡಾ. ಶಿವಕುಮಾರ್ |
| ತಂದೆಯ ಹೆಸರು | : | ಜಿ. ರಾಮ |
| ವಯಸ್ಸು | : | 60 ವರ್ಷ |
| ಉದ್ಯೋಗ | : | ನಿವೃತ್ತ ವೈದ್ಯಾಧಿಕಾರಿ |
| ವಾಸ ಸ್ಥಳ | : | ಕುಂದಾಪುರ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸ.ಸ.ಅ.ರವರಿಂದಃ**

ನಾನು 2001 ರಿಂದ ಮೇ 2024ರವರೆಗೆ ಕುಂದಾಪುರದ ಸರಕಾರಿ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 29-03-2015 ರಂದು ಚಾಸಾ-1ರವರು ಮಧ್ಯಾಹ್ನ 1-10 ಗಂಟೆ ಸಮಯಕ್ಕೆ ಹೊಡೆದಾಟದ ಹಿನ್ನೆಲೆಯಲ್ಲಿ ಚಿಕಿತ್ಸೆಗಾಗಿ ನಮ್ಮ ಆಸ್ಪತ್ರೆಗೆ ಬಂದಿರುತ್ತಾರೆ. ಅವರನ್ನು ಪರೀಕ್ಷಿಸಲಾಗಿದ್ದು, ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತದೆ.

1. 2x3 ಇಂಚು ಗಾತ್ರದ ಎದೆಯ ಮೇಲೆ ಉಬ್ಬಿದ ಗಾಯ ಅದರ ಮೇಲೆ 4 ತರುಚಿದ ಗಾಯಗಳು
2. ½ ಸೆ.ಮೀ.ನ ಹರಿದ ಗಾಯ ಎಡಕಿವಿಯ ಮೇಲೆ ಕಂಡು ಬರುತ್ತದೆ.

ಸದ್ರಿ ಗಾಯಗಳು ತಾಜಾ ಮತ್ತು ಸಾಮಾನ್ಯ ಸ್ವರೂಪದ ಗಾಯವಾಗಿರುತ್ತದೆ. ಈ ಬಗ್ಗೆ ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಸದ್ರಿ ಗಾಯದ ಪ್ರಮಾಣ ಪತ್ರವನ್ನು ನಿಪಿ-2 ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಎಚ್ ಎನ್ ಪಿ ರವರಿಂದಃ**

ನಿಪಿ-2 ರಲ್ಲಿ ಗಾಯದ ವಯಸ್ಸನ್ನು ನಮೂದಿಸಿಲ್ಲ. ಆದರೆ ತಾಜಾ ಗಾಯವಾಗಿರುವುದಾಗಿ ಕಂಡು ಬರುತ್ತದೆ. ಪ್ರಾಸಾ-1ರವರು ಕಣ್ಣಿಗೆ ಗಾಯವಾಗಿದೆ ಎಂದು ತಿಳಿಸಿಲ್ಲ. ತಪಾಸಣೆ ವೇಳೆ ಆ ರೀತಿ ಕಣ್ಣಿಗೆ ಗಾಯವಾಗಿರುವುದು ಕಂಡು ಬಂದಿರುವುದಿಲ್ಲ. ಕಬ್ಬಿಣದ ರಾಡ್ ಹಾಗೂ ತೆಂಗಿನ ಗರಿಯಿಂದ ಹೊಡೆದಿರುವುದಾಗಿ ಮಾಹಿತಿ ನೀಡಿರುತ್ತಾರೆ. ನಾವು ಸದ್ರಿ ವಸ್ತುಗಳನ್ನು ನೋಡಿರುವುದಿಲ್ಲ. ಒಬ್ಬ ವ್ಯಕ್ತಿ ಒರಾಟದ ನೆಲದ ಮೇಲೆ ಕಾಲು ಜಾರಿ ಮುಖ ಕೆಳಗೆ ಹಾಕಿ ಬಿದ್ದರೆ ನಿಪಿ-2 ರಲ್ಲಿ ನಮೂದಿಸಿರುವ ಗಾಯಗಳು ಆಗುವ ಸಾಧ್ಯತೆ ಇರಬಹುದು. ಕಬ್ಬಿಣದ ರಾಡ್ ನಿಂದ ಹೊಡೆದರೆ ನಿಪಿ-2ರಲ್ಲಿ ನಮೂದಿಸಿರುವ ಗಾಯಕ್ಕಿಂತ ಹೆಚ್ಚಿನ ಗಾಯಗಳು ಆಗುವ ಸಾಧ್ಯತೆ ಇರುತ್ತದೆ ಎಂದರೆ ಸರಿಯಲ್ಲ.

ಪಿರ್ಯಾದುದಾರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಗಾಯದ ಪ್ರಮಾಣ ಪತ್ರ ವಿತರಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ . ದಂ. ಕುಂದಾಪುರ**